ಗೋಕರ್ಣ ಮಹಬಲೇಶ್ವರ ದೇವಸ್ಥಾನದ ಕಟ್ಟಡದ ವಾರ್ಷಿಕ ದುರಸ್ತಿ.

193(2199)

ಶ್ರೀ ಚೌಡರೆಡ್ಡಿ(ಚಿಂತಾಮಣಿ): ಮಾನ್ಯ ಸಣ್ಣ ಉಳಿತಾಯ ಮತ್ತು ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಸಿದ್ಧವಾದ ಗೋಕರ್ಣ ಮಹಬಲೇಶ್ವರ ದೇವಸ್ಥಾನವು ರಾಜ್ಯ ಸರ್ಕಾರದ ಕಾನೂನಿಗೆ ಒಳಪಟ್ಟ ಮುಜರಾಯಿ ಇಲಾಖೆಯ ಮೇಲ್ವಿಚಾರಣೆಗೆ ಸಂಬಂಧಪಟ್ಟಿದೆಯೇ?

2. ಒಳಪಟ್ಟಿದ್ದರೆ, ದೇವಸ್ಥಾನದ ಪರಿಸರ ಮತ್ತು ಕಟ್ಟಡದ ವಾರ್ಷಿಕ ರಿಪೇರಿಗಳನ್ನು ಸಮರ್ಪಕವಾಗಿ ನಡೆಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಪರಿಸರದ ಶುಚಿತ್ವವಿಲ್ಲದೇ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಹಾಗಿದ್ದಲ್ಲಿ ಪರಿಹಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು):

1. ಹೌದು. ಸದರಿ ದೇವಾಲಯವು ಮುಂಬಯಿ ಸಾರ್ವಜನಿಕ ಜಿಮ್ಮೆಗಳ ನೋಂದಣಿ ಕಾಯ್ದೆ 1950ರ ಕೆಳಗೆ ಕ್ರಮ ಸಂಖ್ಯೆ ಎ 540(ಕಾರವಾರ)ದಲ್ಲಿ ಬೆಳಗಾಂ ಸಹಾಯಕ ಧರ್ಮ ದತ್ತಿ ಆಯುಕ್ತರು ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ.

2. ಶ್ರೀ ಮಹಾಬಲೇಶ್ವರ ದೇವರ ಅಭಿಷೇಕದ ನೀರು ಸರಾಗವಾಗಿ ಹರಿದು ಸಮುದ್ರಕ್ಕೆ ಸೇರದೆ ಇರುವುದರಿಂದ ಪರಿಸರ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

3. ಈ ಬಗ್ಗೆ ಅಭಿಷೇಕದ ನೀರು ಸರಾಗವಾಗಿ ಹೊರಗಡೆಯ ಸಮುದ್ರಕ್ಕೆ ಸೇರಲು ದೇವಾಲಯದ ಹೊರಗೆ ಹೂಳೆತ್ತಿಸುವ ಕಾರ್ಯವನ್ನು ಸದರಿ ಪಂಚಾಯಿತಿ ಕಮಿಟಿಯವರು ಮಾಡಬೇಕಾಗಿದ್ದು ಈ ವಿಷಯವನ್ನು ಜಿಲ್ಲಾ ಪಂಚಾಯಿತಿ, ಕಾರವಾರರವರ ಗಮನಕ್ಕೆ ತರಲಾಗಿದೆ.

4. ಹೂಳೆತ್ತುವ ಕಾರ್ಯವನ್ನು ಜಿಲ್ಲಾ ಪಂಚಾಯತ್, ಕಾರವಾರ ಇವರು ಕ್ರಮ ಕೈಗೊಳ್ಳಬೇಕಾಗಿರುತ್ತದೆ ಹಾಗೂ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಮತ್ತು ಕಟ್ಟಡದ

ವಾರ್ಷಿಕ ರಿಪೇರಿಗಳು ಕೈಗೊಳ್ಳುವುದು ಟ್ರಸ್ಟೀಗಳ ಜವಾಬ್ದಾರಿಯಾಗಿರುತ್ತದೆ. ಅದರಂತೆ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೇ, ಈ ದೇವಸ್ಥಾನ ಬಹಳ ಪ್ರಸಿದ್ಧಿಯಾದಂಥ ದೇವಸ್ಥಾನ. ಮತ್ತು ಬಹಳ ಒಳ್ಳೆಯ ದೇವಸ್ಥಾನ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಸುಮಾರು 4 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಗೋಕರ್ಣದ ಹತ್ತಿರ ಒಂದು ಸಮಾರಂಭಕ್ಕೆ ಅವರ ಶ್ರೀಮತಿಯವರ ಜೊತೆಯಲ್ಲಿ ಹೋಗಿದ್ದರು. ಆ ಸಂದರ್ಭದಲ್ಲಿ ಅವರ ಶ್ರೀಮತಿಯವರು ಆ ದೇವಸ್ಥಾನಕ್ಕೆ ಬಂದು, ಅಲ್ಲಿನ ಪರಿಸ್ಥಿತಿಯನ್ನು ನೋಡಿಬಿಟ್ಟು, ಅಲ್ಲಿ ಸುತ್ತಲೂ ಇರತಕ್ಕ ಗಲೀಜು, ಆ ಬಿಲ್ಡಿಂಗ್ ಸರಿಯಾಗಿ ನೋಡಿಕೊಳ್ಳದೇ ಇರುವುದು, ದೇವಸ್ಥಾನದ ಕಟ್ಟಡ ಯಾವರೀತಿ ಇದೆ ಎಂಬುದನ್ನು ನೋಡಿಬಿಟ್ಟು, ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಸಮಾರಂಭದಲ್ಲಿದ್ದರೂ, ಅಲ್ಲಿಗೇ ಹೋಗಿ ಕೇಳಿಕೊಂಡು, ಅವರನ್ನೂ ಕರೆದುಕೊಂಡು ಹೋಗಿದ್ದಾರೆ. ಅವರೂ ನೋಡಿದ್ದಾರೆ. ಇಂತಹ ಪ್ರಸಿದ್ಧಿಯಾದಂಥ ದೇವಸ್ಥಾನದ ಬಗ್ಗೆ ಇವತ್ತು ಇದು ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್‌ಗೆ ಸೇರಿದೆ ಎಂದು ಹೇಳುತ್ತಾರೆ. ಆ ಏರಿಯಾ ಎಲ್ಲವೂ ನಮ್ಮ ಕರ್ನಾಟಕಕ್ಕೆ ಸೇರಿದೆ. ಆದರೆ, ನಮ್ಮ ಮುಜರಾಯಿ ಡಿಪಾರ್ಟ್‌ಮೆಂಟಿಗೆ ಅದು ಸೇರಿಲ್ಲ. ಜೊತೆಗೆ ಚಾರಿಟಬಲ್ ಕಮೀಷನರ್, ಬೆಳಗಾಮ್‌ನವರು ಈ ದೇವಸ್ಥಾನವನ್ನು ನೋಡಿಕೊಳ್ಳತಕ್ಕಂತಾದ್ದು. ಈ ಗೋಕರ್ಣ ಇರತಕ್ಕಂತಾದ್ದು ಎಲ್ಲಿ, ಬೆಳಗಾಂ ಇರತಕ್ಕಂತಾದ್ದು ಎಲ್ಲಿ? ಅಲ್ಲಿ ಎಷ್ಟು ತೊಂದರೆಯಾಗಿದೆ ಎಂದರೆ, ಅಂತಹ ಪ್ರಸಿದ್ಧಿಯಾದಂಥ ದೇವಸ್ಥಾನವನ್ನು, ಅಷ್ಟು ನಿರ್ಲಕ್ಷ್ಯದಿಂದ ನೋಡುತ್ತಿದ್ದಾರೆ. ಇದನ್ನು ನಮ್ಮ ಮುಜರಾಯಿ ಡಿಪಾರ್ಟ್‌ಮೆಂಟಿಗೆ ಸೇರಿಸಿಕೊಂಡು, ಅಭಿವೃದ್ಧಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಲ ಬೇರೆ ಬೇರೆ ದೇವಸ್ಥಾನಗಳಿಗೆ ಹೋಗಿ ಸಾವಿರಾರು ಕೋಟಿ ಕೊಡುತ್ತಾ ಇದ್ದಾರೆ. ಈ ದೇವಸ್ಥಾನಕ್ಕೂ ಮಾನ್ಯ ಮುಖ್ಯಮಂತ್ರಿಗಳು ದುಡ್ಡು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇಲ್ಲಿ ಏನು ಹೇಳಿದ್ದಾರೆಂದರೆ, ಮಹಾಬಲೇಶ್ವರ ದೇವರ ಅಭಿಷೇಕದ ನೀರು ಸಮುದ್ರಕ್ಕೆ ಹರಿದು ಹೋಗುತ್ತದಂತೆ. ಅಲ್ಲಿ ದೇವಸ್ಥಾನದ ಹೊರಗಡೆ ಹೂಳು ತೆಗೆಯುವ ಕಲಸವನ್ನು ಅಲ್ಲಿನ ಪಂಚಾಯ್ತಿಯವರಿಗೆ ಒಪ್ಪಿಸಿದ್ದೇವೆಂದು ಹೇಳುತ್ತಾರೆ. ಇದು ಬಹಳ ಅನ್ಯಾಯವಾಗುತ್ತಾ ಇದೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ದುಡ್ಡು ಕೊಟ್ಟು, ಆ ದೇವಸ್ಥಾನವನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವ ಹಾಗೆ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚಿಂಚನಸೂರ್: ಅಭಿಷೇಕದ ನೀರು ಸಮುದ್ರಕ್ಕೆ ಹೋಗದಿರುವುದು ಮತ್ತು ಅದರಿಂದ ತೊಂದರೆಯಾಗುತ್ತಿರುವುದು ಸರ್ಕಾರದ

ಗಮನಕ್ಕೆ ಬಂದಿದೆ. ಆದರೆ, ಅಲ್ಲಿಯ ದೇವಸ್ಥಾನದ ಪಂಚಾಯ್ತಿ ಕಮಿಟಿಯವರು ಮಾಡಬೇಕಾಗಿತ್ತು. ಅದು ಮಾಡಿಲ್ಲ. ನಾವು ಕಾರವಾರ ಜಿಲ್ಲಾ ಪಂಚಾಯ್ತಿಯವರಿಗೆ ವಹಿಸಿರುತ್ತೇವೆ. ಇತ್ತೀಚೆಗೆ ನಾವು ದೇವಸ್ಥಾನದ ಟ್ರಸ್ಟಿಗಳಿಗೂ ಆದೇಶ ಕೊಟ್ಟಿದ್ದೇವೆ. ಕೂಡಲೇ ಆ ಅಭಿಷೇಕದ ನೀರು ಸಮುದ್ರಕ್ಕೆ ಹೋಗಲು ದೇವಸ್ಥಾನದ ಹೊರಗಡೆ ಹೂಳು ತೆಗೆದು ವ್ಯವಸ್ಥೆ ಮಾಡಬೇಕೆಂದು ಧರ್ಮದರ್ಶಿಗಳಿಗೆ ನಾವು ಆದೇಶ ಕೊಟ್ಟಿದ್ದೇವೆ. ಸದ್ಯದಲ್ಲಿಯೇ ಕಾರ್ಯದರ್ಶಿಯವರನ್ನು ಅಲ್ಲಿಗೆ ಕಳುಹಿಸಿ, ಸಮಸ್ತ ವರದಿಯನ್ನು ತರಿಸಿ, ಫೋರ್ಪಡೆಯವರ ಜೊತೆಯಲ್ಲಿ ಚರ್ಚೆ ಮಾಡಿ, ಅಲ್ಲಿ ಹೂಳು ತೆಗೆಯುವ ವ್ಯವಸ್ಥೆ ಮಾಡುತ್ತೇವೆ. ಮತ್ತು ಅಲ್ಲಿನ ಪರಿಸರ ಕೆಡದಂತ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಚೌಡರೆಡ್ಡಿ: ಆ ದೇವಸ್ಥಾನದ ಅಭಿವೃದ್ಧಿಗೆ ಮಾನ್ಯ ಮುಖ್ಯಮಂತ್ರಿಗಳು ದುಡ್ಡು ಕೊಡಬೇಕೆಂದು ತಮ್ಮ ಮುಖಾಂತರ ಅವರಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚಿಂಚನಸೂರ್: ಬಜೆಟ್‌ನಲ್ಲಿ ನಿರ್ವಹಣಾ ವೆಚ್ಚದ ಹಣ ಇದ್ದರೆ, ನಾನು ಫೋರ್ಪಡೆಯವರ ಹತ್ತಿರ ಚರ್ಚೆ ಮಾಡಿ, ಹೂಳು ತೆಗೆಯಿಸತಕ್ಕ ವ್ಯವಸ್ಥೆ ಮಾಡಿ, ಅಲ್ಲಿನ ಪರಿಸರ ಕೆಡದಂತೆ ನಿವಾರಣೆ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಮೋಹನ್ ಕೆ.ಶೆಟ್ಟಿ:ಈ ದೇವಸ್ಥಾನ ನನ್ನ ಕ್ಷೇತ್ರದಲ್ಲಿ ಬರುತ್ತದೆ. ನಾನು ಅದರ ಬಗ್ಗೆ ಪ್ರಶ್ನೆ ಹಾಕಿದ್ದೇನೆ. ಆದರೆ, ನನ್ನ ಪ್ರಶ್ನೆ ಅನ್ ಸ್ಟಾರ್ಡ್ ಆಗಿ ಬಂದಿದೆ. ಈ ಗೋಕರ್ಣ ''ದಕ್ಷಿಣ ಕಾಶಿ'' ಎಂಬ ಪ್ರಸಿದ್ಧವಾದ ದೇವಾಲಯ. ಇದಕ್ಕೆ ಜಗತ್ತಿನಾದ್ಯಂತ ಭಕ್ತರು ಇದ್ದಾರೆ. ಪ್ರತಿದಿನ ಸಾವಿರಾರು ಜನ ಭಕ್ತಾದಿಗಳು ಬಂದು ಹೋಗುತ್ತಿದ್ದಾರೆ. ಈ ದೇವಸ್ಥಾನ ಬಹಳ ಅವ್ಯವಸ್ಥೆಯಿಂದ ಕೂಡಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ನಾವು ಅವರಿಗೆ ಮನವಿ ಮಾಡಿದ್ದೇವೆ. ಅಲ್ಲಿ ಕೂಡಲೇ, ತಿರುಪತಿಯಲ್ಲಿರುವ ಟ್ರಸ್ಟ್‌ನ ಹಾಗೆ ಅಥವಾ ಸವದತ್ತಿಯಲ್ಲಿರುವ ಟ್ರಸ್ಟ್‌ನ ಹಾಗೆ ಮಾಡಬೇಕು. ಅಲ್ಲಿ ವರ್ಷಕ್ಕೆ ನೂರಾರು ಕೋಟಿ ರೂಪಾಯಿಗಳ ಆದಾಯ ಕೂಡ ಮಾಡಲಿಕ್ಕೆ ಬರುತ್ತದೆ. ತಿರುಪತಿ ತರಹ ಇದನ್ನೂ ಸಿಟಿ ಹಾಗೆ ಮಾಡಲಿಕ್ಕೆ ಬರುತ್ತದೆ. ಕೂಡಲೇ ಸರ್ಕಾರದವರು ಇದರ ಬಗ್ಗೆ ಕ್ರಮ ತೆಗೆದುಕೊಂಡು, ಅಲ್ಲಿ ಹಾಲಿ ಇರತಕ್ಕ ಟ್ರಸ್ಟಿಗಳನ್ನೆಲ್ಲಾ ನಿರ್ಮೂಲನೆ ಮಾಡಿ, ಹೊಸದಾಗಿ ಒಂದು ಟ್ರಸ್ಟ್ ಮಾಡಬೇಕೆಂದು ಹೇಳಿ ನಾನು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಅಲ್ಲಿ ಹೂಳೆತ್ತುವುದಕ್ಕೆ ಗ್ರಾಮ ಪಂಚಾಯ್ತಿಯವರಿಂದ ಆಗುವುದಿಲ್ಲ. ಏಕೆಂದರೆ ಕರೆಂಟ್ ದುಡ್ಡನ್ನು ತುಂಬುವುದಕ್ಕೇ ಹಣ ಇಲ್ಲ. ಅವರು ಕಟ್ಟಡ ಕ್ಲೀನ್ ಮಾಡುವುದು ಹೇಗೆ? ಪುಣ್ಯವಾದ ಆತ್ಮಲಿಂಗ ಸಹಿತ, ಈ ರಾಡಿ ನೀರಿನಿಂದ ಆವೃತವಾಗಿರುತ್ತದೆ. ಆದ್ದರಿಂದ, ದಯವಿಟ್ಟು ಇದನ್ನು ಪರಿಶೀಲಿಸಬೇಕು.

ಮುಜರಾಯಿ ಇಲಾಖೆಯವರೇ ಇದನ್ನು ಕೈಗೆತ್ತಿಕೊಂಡು ಮಾಡಬೇಕೆಂದು ಹೇಳಿ, ನಾನು ತಮ್ಮಲ್ಲಿ ಕಳಕಳಿಯ ಏನಂತಿ ಮಾಡುತ್ತೇನೆ.

ಶ್ರೀ ಬಾಬುರಾವ್ ಚಿಂಚನಸೂರ್: ಸನ್ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಏಕರೂಪದ ಶಾಸನವನ್ನು ಜಾರಿಗೆ ತರುತ್ತಿದ್ದೇವೆ. ಈ ಶಾಸನ ಬಂದನಂತರ, ಕರ್ನಾಟಕದಲ್ಲಿ ಈ ತರಹ ಎಲ್ಲೆಲ್ಲಿ ಆಗುತ್ತಿದೆ, ಅವುಗಳನ್ನೆಲ್ಲಾ ನಾವು ಪರಿಹಾರ ಮಾಡಬಹುದು. ಆದರೂ ಸಹಿತ, ನಾನು ಸಧ್ಯದಲ್ಲೇ ಕಾರ್ಯದರ್ಶಿಯವರನ್ನು ಕಳುಹಿಸಿ, ಸಮಸ್ತ ವರದಿಯನ್ನು ತರಿಸಿ ಆದಷ್ಟು ಮಟ್ಟಗೆ ನಾನು ಮಾನ್ಯ ಘೋರ್ಪಡೆಯವರ ಜೊತೆ ಚರ್ಚೆ ಮಾಡಿ, ಇದನ್ನು ಪರಿಹಾರ ಮಾಡುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಈ ಸಂದರ್ಭದಲ್ಲಿ ಸದನದಲ್ಲಿ ಉಪಸ್ಥಿತರಿದ್ದಾರೆ. ನಮ್ಮ ಜಿಲ್ಲೆಯು ಪ್ರವಾಸೋದ್ಯಮಕ್ಕೆ ಅತ್ಯಂತ ಹೆಸರುವಾಸಿ ಜಿಲ್ಲೆಯೆಂದು ರಾಜ್ಯದ ಜನತೆಗೆ ಮತ್ತು ದೇಶದ ಜನತೆಗೆ ಗೊತ್ತಿದೆ. ನಮ್ಮ ಜಿಲ್ಲೆಗೆ ಬಂದವರು ಗೋಕರ್ಣಕ್ಕೆ ಹೋಗದೆ ಹೋಗುವುದೇ ಇಲ್ಲ. ಏಕೆಂದರೆ, ಗೋಕರ್ಣ ಅಂತಹ ಒಂದು ಪುಣ್ಯ ಕ್ಷೇತ್ರ ಹಾಗೂ ಪವಿತ್ರ ಕ್ಷೇತ್ರ. ಅಲ್ಲಿ ಬೇರೆ ಬೇರೆ ಇಲಾಖೆಗಳ ಸಮನ್ವಯದ ಕೊರತೆಯಿಂದಾಗಿ, ಉಳಿದ ವ್ಯವಸ್ಥೆಗಳು ಸಮರ್ಪಕವಾಗಿಲ್ಲ. ತೀರ್ಥದ ನೀರು ಸಮುದ್ರಕ್ಕೆ ಹೋಗದೇ ಇರುವುದಕ್ಕೆ ಕಾರಣ ಬರೀ ಆಡಳಿತ ಮಂಡಳಿ ಒಂದೇ ಕಾರಣವಲ್ಲ ಸರ್ಕಾರದ ಉಳಿದ ಇಲಾಖೆಗಳ ವ್ಯವಸ್ಥೆಯೂ ಕಾರಣ ಇದೆ. ಹಾಗಾಗಿ ಗೋಕರ್ಣವನ್ನು ಅಭಿವೃದ್ಧಿಪಡಿಸಬೇಕಾದರೂ, ದೇವಸ್ಥಾನ ಅಭಿವೃದ್ಧಿಪಡಿಸುವುದು ಒಂದು ಭಾಗವಾದರೆ ಉಳಿದ ಇಲಾಖೆಗಳ ಸಮನ್ವಯದ ಅಗತ್ಯತೆಯೂ ಇದೆ. ಇದಕ್ಕೆ ವಿಶೇಷವಾದಂಥ ಆದ್ಯತೆ ಕೊಟ್ಟು, ಪ್ರಾಮುಖ್ಯತೆ ಕೊಟ್ಟು ಜಿಲ್ಲೆಯ ಪ್ರವಾಸೋದ್ಯಮದ ಬೆಳವಣಿಗೆಗೂ ಅನುಕೂಲವಾಗುತ್ತದೆ. ಮತ್ತು ಬಂದಂಥ ಭಕ್ತರಿಗೂ ಒಂದು ಕೃತಾರ್ಥದ ಭಾವನೆ ಬರುತ್ತದೆ. ಇಲ್ಲವಾದರೆ ಬೈಯ್ದುಕೊಂಡು ಹೋಗುವಂಥ ಸ್ಥಿತಿಯಾಗುತ್ತದೆ. ಹಾಗಾಗಿ ಮುಜರಾಯಿ ಇಲಾಖೆ ಜೊತೆಗೆ ವಿಶೇಷವಾಗಿ ಜಿಲ್ಲಾ ಆಡಳಿತಕ್ಕೆ ಈ ವಿಚಾರವಾಗಿ ಸಮಗ್ರವಾದ ಯೋಜನೆಯನ್ನು ರೂಪಿಸುವಂಥ ಅಗತ್ಯ ಇದೆ. ಬಹುತಃ ಉಸ್ತುವಾರಿ ಸಚಿವರು ಇದನ್ನು ಗಮನಿಸುತ್ತಾರೆಂದು ಅಂದುಕೊಂಡಿದ್ದೇನೆ.

ಶ್ರೀ ಮೋಹನ್ ಕೆ.ಶೆಟ್ಟಿ: ಮುಜರಾಯಿ ಇಲಾಖೆಯವರು ಏನೂ ಹಣ ಬಿಡುಗಡೆ ಮಾಡುವುದಿಲ್ಲ. ತತಕ್ಷಣ ಈ ಕ್ಷೇತ್ರವನ್ನು ಅಭಿವೃದ್ಧಿ ಮಾಡಿ, ಭಕ್ತರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಎನ್.ಯೋಗೀಶ್ ಭಟ್: ಗೋಕರ್ಣದ ಬಗ್ಗೆ ಚರ್ಚೆ ನಡೆಯುತ್ತಾ ಇದೆ.

ಸಮಗ್ರವಾದಂಥ ಅಭಿವೃದ್ಧಿ ಯೋಜನೆಗಳು ರೂಪಿತವಾಗಬೇಕು. ಮುಜರಾಯಿ ಇಲಾಖೆಯ ಜೊತೆಗೆ ಉಳಿದ ಇಲಾಖೆಗಳ ಸಮನ್ವಯವಾಗಬೇಕು. ಜಿಲ್ಲಾ ಆಡಳಿತ ವಿಶೇಷವಾದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಗೋಕರ್ಣದಲ್ಲಿ ಫ್ಲೋರಿಂಗ್ ಕೆಲಸ ನಡೆಯುತ್ತಾ ಇದೆ. ಗೋಕರ್ಣ ಬಹಳ ಪವಿತ್ರವಾದಂಥ ಕ್ಷೇತ್ರವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾಶಿಗಿಂತ ಗೋಕರ್ಣ ಪವಿತ್ರ ಎಂದು ಹೇಳುತ್ತಾರೆ. ಹಾಗಾಗಿ ಅಲ್ಲಿ ಅಭಿವೃದ್ಧಿಯಾಗಬೇಕು, ಸಾಕಷ್ಟು ಸಮಸ್ಯೆಗಳು ಇವೆ. ಮುಖ್ಯವಾಗಿ ಕುಡಿಯುವ ನೀರು, ಇದಕ್ಕೆ ಈಗಾಗಲೇ ಮಂಜೂರು ಮಾಡಿದ್ದೇವೆ. ಅಲ್ಲಿ ಒಂದು ಬಸ್ ಸ್ಟ್ಯಾಂಡ್ ಪ್ರಾರಂಭ ಮಾಡಿದ್ದೇವೆ. ಆ ಭಾಗದಲ್ಲಿ ಪ್ರವಾಸೋದ್ಯಮ ಸಾಕಷ್ಟು ಬೆಳೆಯುವುದಕ್ಕೆ ಅವಕಾಶ ಇದೆ. ಅಲ್ಲಿ ಕೆಲವು ಕಟ್ಟಡಗಳು ಖಾಲಿ ಇದ್ದವು, ಅವುಗಳನ್ನು ಜಂಗಲ್ ಲಾಡ್ಜಸ್‌ನವರಿಗೆ ಕೊಟ್ಟಿದ್ದೇವೆ. ಮೂಲಭೂತ ಸೌಕರ್ಯಗಳನ್ನು ಬೆಳೆಸುವಾಗ ಯಾತ್ರಿನಿವಾಸ್ ಬಗ್ಗೆ ಲ್ಯಾಂಡ್ ಪ್ರಾಬ್ಲಮ್ ಆಗಿದೆ ಎಂದು ಮಾನ್ಯ ಶಾಸಕರು ಹೇಳುತ್ತಾರೆ. ಮುಖ್ಯವಾಗಿ ದೇವಾಲಯದಲ್ಲಿ ಯಾವ ರೀತಿ ಸ್ವಚ್ಛತೆ ಇರಬೇಕೋ ಆ ರೀತಿ ಇಲ್ಲ, ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಸಾಕಷ್ಟು ಅಭಿವೃದ್ಧಿ ಆಗಬೇಕು. ಒಳ್ಳೆಯ ಸಲಹೆ ಬಂದಿದೆ. ನಾನೇ ಸ್ವತಃ ಒಂದು ಮೀಟಿಂಗ್ ಕರೆಸಿ ಮಾನ್ಯ ಮುಜರಾಯಿ ಮಂತ್ರಿಗಳನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳ ಸಹಕಾರದೊಂದಿಗೆ ಮಾಡೋಣ. ಮಾನ್ಯ ಶಾಸಕರು ಸಾಕಷ್ಟು ಆಸಕ್ತಿಯನ್ನು ಹೊಂದಿದ್ದಾರೆ. ಸಂತೋಷ.

ಶ್ರೀ ಸಿ.ಬೈರೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಸ್ವಚ್ಛತೆ ಇಲ್ಲದೇ ಇರತಕ್ಕಂಥ ಕಡೆ ಮತ್ತು ಇಷ್ಟೊಂದು ಸಮಸ್ಯೆಗಳು ಇರುವ ಕಡೆ ನಿಜವಾಗಿಯೂ ದೇವರು ಇದ್ದಾನೆಯೇ?

ಅಧ್ಯಕ್ಷರು: ಆ ವಿಚಾರ ನಮಗೆ ಬೇಕಾಗಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಗೋಕರ್ಣದಲ್ಲಿ ಯಾವ ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ತಿರುಪತಿಯಲ್ಲಿ ಇದೆ. ಮುಜರಾಯಿ ಇಲಾಖೆಯ ಪ್ರಸಿದ್ಧಿ ದೇವಸ್ಥಾನಗಳು ಎಲ್ಲೆಲ್ಲಿ ಇವೆಯೋ ಅಲ್ಲಿ ಇದೇ ಪರಿಸ್ಥಿತಿ ಇದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಂಟ್ರೆಸ್ಟ್ ತೆಗೆದುಕೊಳ್ಳಬೇಕು. ಹಿಂದೆ ಮಾನ್ಯ ಮುಜರಾಯಿ ಸಚಿವರು ಭರವಸೆ ಕೊಟ್ಟರು ಏನೂ ಮಾಡಲಿಲ್ಲ. ತಿರುಪತಿ ಛತ್ರದ ಬಗ್ಗೆ. ಅವರು ಏನೂ ಮಾಡುವುದಿಲ್ಲ. ಗೋಕರ್ಣ ಅಷ್ಟೇ, ತಿರುಪತಿ ಅಷ್ಟೆ. ಅವರು ಬರೀ ಆಶ್ವಾಸನೆ ಕೊಡುತ್ತಾರೆ ಅಷ್ಟೇ. ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಮಂತ್ರಿಗಳಿಗೆ ಸರಿಯಾದ ಒಂದು ನಿರ್ದೇಶನ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಇವರನ್ನು ಬದಲಾವಣೆ ಮಾಡಲಿ. ಇವರ ಕೈಯಲ್ಲಿ ಏನೂ ಆಗುವುದಿಲ್ಲ.

ಶ್ರೀ ಬಾಬುರಾವ್ ಚಿಂಚನಸೂರ್: ಮಾನ್ಯ ಅಧ್ಯಕ್ಷರೇ, ನಾನು ಕಳೆದ ಅಧಿವೇಶನದಲ್ಲಿ ಈ ಸದನದಲ್ಲಿ ಹೇಳಿದ ಪ್ರಕಾರ ತಿರುಪತಿಗೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಟೆಂಡರ್ ಕರೆದು ಕೆಲಸ ಶುರು ಮಾಡಿದ್ದೇವೆ. ಮಾನ್ಯ ಸದಸ್ಯರು ತಿರುಪತಿಗೆ ಭೇಟಿ ಕೊಟ್ಟಿಲ್ಲ. ಆದ್ದರಿಂದ ಅವರಿಗೆ ಈ ವಿಷಯ ಸರಿಯಾಗಿ ಗೊತ್ತಿಲ್ಲ.

ಹುಲಸೂರು ವಿಧಾನ ಸಭಾ ಕ್ಷೇತ್ರದಲ್ಲಿನ ಮೆಹಕರ್ ಗ್ರಾಮದಲ್ಲಿ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ.

194(1896)

ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರು ವಿಧಾನಸಭಾ ಕ್ಷೇತ್ರ ಮಹಾರಾಷ್ಟ್ರ ಗಡಿ ಭಾಗದಲ್ಲಿ ಬರುವ ಮೆಹಕರ್ ಗ್ರಾಮದಲ್ಲಿ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಮಂಜೂರಾತಿಯನ್ನು ನೀಡುವಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು?

ಆ) ಈ ಗ್ರಾಮವು ಸೂಕ್ಷ್ಮ ಪ್ರದೇಶವಾಗಿರುವುದರಿಂದ ಆದಷ್ಟು ಶೀಘ್ರವಾಗಿ ಸರ್ಕಾರ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವುದೇ? ಇಲ್ಲವಾದಲ್ಲಿ ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ ಮತ್ತು ಆ) ಮೆಹಕರ್ ಗ್ರಾಮದಲ್ಲಿ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ರಾಜೇಂದ್ರವರ್ಮ: ಮಾನ್ಯ ಅಧ್ಯಕ್ಷರೆ, ಮೆಹಕರ್ ಗ್ರಾಮದಲ್ಲಿ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ಎಂದು ನಾನು ಕೇಳಿದ್ದೇನೆ. ಮಾನ್ಯ ಗೃಹ ಸಚಿವರು ಬಂದಿಲ್ಲ ಎಂದು ಹೇಳಿದ್ದಾರೆ. ಇದರ ಸಂಬಂಧವಾಗಿ ನಾನು ಎಸ್.ಪಿ. ಮತ್ತು ಡಿ.ಐ.ಜಿ.ಯವರಲ್ಲಿ ವಿಚಾರಣೆ ಮಾಡಿದಾಗ ನಾವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೇವೆಂದು ಹೇಳಿದ್ದಾರೆ. ಮೇಲಾಗಿ ಈ ಪ್ರದೇಶ ಅತೀ ಸೂಕ್ಷ್ಮವಾದ ಪ್ರದೇಶ ಆಗಿದೆಯೋ ಇಲ್ಲವೋ ಅಂಥ ನಾನು ಕೇಳಿದ್ದೇನೆ, ಅದಕ್ಕೆ ಉತ್ತರ ಹೇಳಲಿಲ್ಲ. ಇದರ ಬಗ್ಗೆ ನಾನು ಯಾರನ್ನು ನಂಬಬೇಕು ಯಾರನ್ನು ಬಿಡಬೇಕು ಎನ್ನುವುದು ಕಷ್ಟವಾಗಿದೆ. ಮಾನ್ಯ ಗೃಹಸಚಿವರು ಹುಟ್ಟಿದ